ದಿಃ 29-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ. ಆರ್.ಆರ್ ವಕೀಲರಿಂದಃ

ದಾವಾ ಆಸ್ತಿಯು ಮೂಲತಃ ತಪೋವನದ ಮುನಿಯಪ್ಪ ರವರಿಗೆ ಸೇರಿದ್ದು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ದಾವಾ ಆಸ್ತಿಯ ಸರ್ವೆ ನಂ.177/2 ಇರುತ್ತದೆ. ದಾವಾ ಆಸ್ತಿಗೆ ಉಪ ಸರ್ವೆ ನಂ. ಅನ್ನು ಪ್ರತಿವಾದಿಗಳು ಮಾಡಿಕೊಂಡಿದ್ದಾರೆ. ದಾವಾ ಆಸ್ತಿಯಲ್ಲಿ ಏನು ಬೆಳೆದಿದ್ದೇವೆ ಎಂದು ವಾದ ಪತ್ರದಲ್ಲಿ ಬರೆಸಿದ್ದೇನೆ. ದಾವಾ ಆಸ್ತಿಯ ಪೂರ್ವಕ್ಕೆ-ಪ್ರಸ್ತುತ ದೋಬಿ ನರಸಿಂಹಯ್ಯ ರವರ ಜಮೀನು ಇರುತ್ತದೆ. ತಪೋವನದ ಮುನಿಯಪ್ಪ ರವರಿಗೆ 4 ಜನ ಮಕ್ಕಳು ಎಂದರೆ ಸರಿ. ಅವರು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳನ್ನು ತಪೋವನದ ಮುನಿಯಪ್ಪನ ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನಿಪಿ-1 ರಲ್ಲಿ ಬರೆದಿದ್ದಾರೆ. ತಪೋವನದ ಮುನಿಯಪ್ಪ ನ ಮರಣಾ ನಂತರ ಆತನ ಮಕ್ಕಳು ದಾವಾ ಆಸ್ತಿಯನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಇದ್ದಾರೆ ಎಂದರೆ ಸರಿಯಲ್ಲ.

ಕೃಷ್ಣಪ್ಪನ ಪಾಲಿಗೆ ಹೋದಂತಹ ¼ ನೇ ಪಾಲನ್ನು ಆತನ ಹೆಂಡತಿ ಅಕ್ಕಾಯಮ್ಮ ರವರು ದಿನಾಂಕ 05-02-1971 ರಂದು ವಿ.ಸಿ ವೆಂಕಟರವಣಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ದಾವಾ ಆಸ್ತಿಯ ಬಗ್ಗೆ ವಿಭಾಗ ಅಮಾನತ್ತಿನಲ್ಲಿರುವ ವಿಚಾರವನ್ನು ಸದರಿ ಕ್ರಯ ಪತ್ರದಲ್ಲೂ ಸಹ ನಮೂದಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮಾರಾಟದ ವಿಚಾರ ನನಗೆ 1971 ರಿಂದ ಗೊತ್ತಿದೆ. ದಾವಾ ಆಸ್ತಿಯ ವಿಸ್ತೀರ್ಣ 6 ಎಕರೆ 2 ಗುಂಟೆ ಇರುತ್ತದೆ. ನಿಪಿ-1 ರಲ್ಲಿ ಅಮಾನತ್ತಿನಲ್ಲಿ ಇಟ್ಟಿರುವುದು ಕೇವಲ ಮರಗಳನ್ನು ಮಾತ್ರ ಎಂದರೆ ಸರಿಯಲ್ಲ. ಸರ್ವೆ ನಂ.117/2 ರ ಪೂರ್ಣ ಕ್ಷೇತ್ರದಲ್ಲಿ ತಪೋವನ ಇದೆ. ನಾನು ಈ ದಾವೆಯನ್ನು ಕೇವಲ 1 ಎಕರೆ 20 ಗುಂಟೆಗೆ ಮಾತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ದಾವೆ ಹೂಡಿದ ವರ್ಷದ ಪಹಣಿಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಿ.ಸಿ ವೆಂಕಟರವಣಪ್ಪ ಈ ದಾವೆಯ ಪಕ್ಷಗಾರರಲ್ಲ ಎಂದರೆ ಸರಿ. ಸರ್ವೆ ಅಧಿಕಾರಿಗಳು ಸ್ಥಳಕ್ಕೆ ಬಂದು ಸರ್ವೆ ಮಾಡಿ ಸರ್ವೆ ನಂ.117/2 ರ ಬದಲಾಗಿ 117/3 ಎಂದು ಕೊಟ್ಟಿದ್ದು ಸದರಿ ಬದಲಾವಣೆಗೆ ತಕರಾರು ಸಲ್ಲಿಸಿದ್ದೀರ ಎಂದರೆ

ಸಾಕ್ಷಿಯು ತನಗೆ ತಿಳಿಯದಂತೆ ಪ್ರತಿವಾದಿಗಳು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ವಿ.ಸಿ ವೆಂಕಟರವಣಪ್ಪ ರವರು ದಾವಾ ಆಸ್ತಿಯನ್ನು ಸರೋಜಮ್ಮ ಮತ್ತು ಕಮಲಮ್ಮ ರವರಿಗೆ 27-03-2000 ಇಸವಿಯಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕ್ರಯ ಪತ್ರ ನೋಂದಣಿ ಆಗಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ಪಹಣಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿಯು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ತಪೋವನದ ಮುನಿಯಪ್ಪ ರವರ 4 ಮಕ್ಕಳ ಪೈಕಿ ನಾರಾಯಣಪ್ಪ, ಗೋಪಾಲಪ್ಪ ಮತ್ತು ಕೃಷ್ಣಪ್ಪ ರವರು ತಪೋವನದ ಆಸ್ತಿಯ ಬಗ್ಗೆ ಅಥವಾ ದಾವಾ ಆಸ್ತಿಯ ಬಗ್ಗೆ ಆದಂತಹ ಕ್ರಯ ಪತ್ರದ ಬಗ್ಗೆ ತಕರಾರನ್ನು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ತಪೋವನದ ಆಸ್ತಿಯನ್ನು ತಾನು ನೋಡಿಕೊಳ್ಳುತ್ತಿರುವುದಾಗಿ ನುಡಿಯುತ್ತಾರೆ.

ತಪೋವನದ ಆಸ್ತಿಯ ವಿಭಾಗದ ನಂತರ ¼ ಪಾಲನ್ನು ವೆಂಕಟರವಣಯ್ಯ ರವರು ನಾರಾಯಣಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ನಾರಾಯಣಪ್ಪ 3 ½ ಗುಂಟೆ ಜಮೀನನ್ನು ಸರ್ವೆ ನಂ.74 ರಲ್ಲಿ ಅಕ್ಕಾಯಮ್ಮ ನಿಂದ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಅಕ್ಕಾಯಮ್ಮ ರವರು ಮಾರಾಟ ಮಾಡಿರುವ ವಿಚಾರ ನನಗೆ 1971 ರಲ್ಲಿ ಗೊತ್ತಿತ್ತು ಎಂದರೆ ಸರಿ. ದಾವಾ ಷೆಡ್ಯೂಲ್ ನಲ್ಲಿ 6 ಎಕರೆ 2 ಗುಂಟೆಗೆ ಚೆಕ್ಕುಬಂದಿಯನ್ನು ನಮೂದಿಸಿದ್ದೇನೆ. ನಿಪಿ-1 ರಲ್ಲಿ ನಮೂದಿಸಿರುವ ಚೆಕ್ಕುಬಂದಿ ಮತ್ತು ದಾವೆ ಯಲ್ಲಿ ನಮೂದಿಸಿರುವ ಚೆಕ್ಕುಬಂದಿ ಮಧ್ಯೆ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಕೇವಲ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಚೆಕ್ಕುಬಂದಿ ನಮೂದಿಸಿ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.177/2 ಈಗಾಗಲೇ ವಿಭಾಗ ಆಗಿದೆ ಎಂದರೆ ಸರಿಯಲ್ಲ. ಜಂಟಿಯಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ನಿಪಿ-21 ರಿಂದ 31 ಭಾವ ಚಿತ್ರಗಳು 6 ಎಕರೆ 2 ಗುಂಟೆ ಆಸ್ತಿಗೆ ಸೇರಿದ ಭಾವಚಿತ್ರಗಳು. ನಿಪಿ-21 ರಿಂದ 31 ಬೇರೆ ಜಮೀನಿಗೆ ಸೇರಿದ ಭಾವಚಿತ್ರಗಳು ಎಂದರೆ ಸರಿಯಲ್ಲ. ನಿಪಿ-21 ರಿಂದ 31 ರಲ್ಲಿ ಹುಣಸೆ, ಬೇವು, ಮಾವು, ಹತ್ತಿ ಮರಗಳು ಮತ್ತು

ಸಮಾಧಿಗಳು ಇವೆ. 6 ಎಕರೆ 2 ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳು ಒಂದು ಉಪ ಸರ್ವೆ ನಂ. ಅನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ. ನಾನು ಮೇಲೆ ಹೇಳಿದ ಮರಗಳನ್ನು ಪಹಣಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ. ಅಕ್ಕಾಯಮ್ಮ ಮಾರಾಟ ಮಾಡಿದ ನಂತರ ವೆಂಕಟರವಣಪ್ಪ ನ ಹೆಸರಿಗೆ ಖಾತೆ ಬಂದಿದೆ ಎಂದರೆ ಸರಿಯಲ್ಲ. ನಂತರ ಸರೋಜಮ್ಮ ಮತ್ತು ಕಮಲಮ್ಮನ ಹೆಸರಿಗೂ ಖಾತೆ ಬಂದಿದೆ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿಗೂ ಸಹ ಪ್ರತ್ಯೇಕವಾಗಿ ಖಾತೆ ಬರುತ್ತಿದೆ ಎಂದರೆ ಸರಿ. ಸದರಿ ಖಾತೆಗಳನ್ನು ಕಂದಾಯ ನ್ಯಾಯಾಲಯಗಳಲ್ಲಿ ಪ್ರಶ್ನೆ ಮಾಡಿಲ್ಲ. 1971 ರಿಂದ 1 ನೇ ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ತಪೋವನದ ಆಸ್ತಿಯ ಬಗ್ಗೆ ಮುನಿಯಪ್ಪನ ಮಕ್ಕಳು ಯಾವುದೇ ತೊಂದರೆ ಮಾಡದೇ ಇದ್ದರೂ ಸಹ ನಾನು ಪ್ರತಿವಾದಿಗಳಿಗೆ ತೊಂದರೆ ಮಾಡುವ ಉದ್ದೇಶದಿಂದ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು